ಪಿಡಬ್ಲ್ಯೂ1 ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ದಿಃ 19-06-2025

<u>ಮುಂದುವರಿದ ಪಾಟೀ ಸವಾಲು ಃ ಶ್ರೀಮತಿ ಕೆ.ಎಸ್. ವಕೀಲರಿಂದಃ</u>

ಆರೋಪಿಗೆ ಸಂಬಂಧಿಸಿದ ಎಲ್.ಐ.ಸಿ ಬಾಂಡ್ ಬಗ್ಗೆ ತಿಳಿದುಕೊಂಡಿರುವುದಿಲ್ಲ. ಎಲ್.ಐ.ಸಿ ಬಾಂಡ್ ನನ್ನ ಕಸ್ಟಡಿಯಲ್ಲಿರುತ್ತದೆ. ಈ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲಾ ಮೂಲ ದಾಖಲೆಗಳು ನನ್ನ ಬಳಿ ಒಂದೂವರೆ ವರ್ಷದಿಂದ ಇರುತ್ತದೆ. ಅದಕ್ಕಿಂತ ಪೂರ್ವದಲ್ಲಿ ಸದ್ರಿ ದಾಖಲೆಗಳು ಕಿಶೋರ್ ದೇವಾಡಿಗರವರ ಬಳಿ ಇತ್ತು. ಎಲ್ಲಾ ಪ್ರಕರಣಗಳ ಮೂಲ ದಾಖಲೆಗಳು ನನ್ನ ಬಳಿ ಇದೆ. ಅದಕ್ಕೆ ಯಾವುದೇ ರಿಜಿಸ್ಟರ್

ನಿರ್ವಹಣೆ ಮಾಡಿರುವುದಿಲ್ಲ. ಸೌಹಾರ್ದ ಕೋ ಅಪರೇಟಿವ್ ಸೊಸೈಟಿಗೆ ಯಾವ ಕಾಯಿದೇ ಅನ್ವಯವಾಗುತ್ತದೆ ಎಂದು ತಿಳಿದುಕೊಂಡಿರುವುದಿಲ್ಲ. ಈಗ ನನಗೆ ತೋರಿಸಿದ ಮೂರು ಚೆಕ್ ಗಳ ದೃಢೀಕೃತ ಪ್ರತಿಗಳಲ್ಲಿರುವ ಕೈ ಬರಹ ಒಂದೇ ಆಗಿರುತ್ತದೆ. ಅದನ್ನು ಸಾಕ್ಷಿಯು ಒಪ್ಪಿದ ಮೇರೆಗೆ ನಿಡಿ-2 ರಿಂದ 4 ಎಂದು ಗುರುತಿಸಲಾಯಿತು. ಮೂರು ದಾಖಲೆಗಳ ಕೈ ಬರಹ ನಮ್ಮ ಕಚೇರಿಯ ಯಾವ ಸಿಬ್ಬಂದಿಯದ್ದು ಎಂದು ಹೇಳಲು ಸಾಧ್ಯವಿಲ್ಲ ಆದರೆ ನಮ್ಮ ಕಚೇರಿಯ ಕ್ಯಾಶಿಯರ್ ಹೆಚ್ಚಾಗಿ ಚೆಕ್ ಗಳನ್ನು ಭರ್ತಿ ಮಾಡುತ್ತಾರೆ. ಸಾಲದ ಮರುಪಾವತಿಗೆ ಚೆಕ್ ನ್ನು ನಮ್ಮ ಕಚೇರಿಯ ಯಾವ ಸಿಬ್ಬಂದಿಗೆ ಬೇಕಾದರು ಕೊಡಬಹುದು. ಈ ಪ್ರಕರಣದಲ್ಲಿ ಚೆಕ್ ನ್ನು ಯಾರು ಪಡೆದುಕೊಂಡಿರುತ್ತಾರೆ ಎಂದು ಹೇಳಲು ಸಾಧ್ಯವಿಲ್ಲ. ನಿಪಿ-3 ನೋಟೀಸಿನಲ್ಲಿ ಆರೋಪಿಯ ಎಫ್.ಡಿ ಗಳನ್ನು ಸಾಲದ ಖಾತೆಗೆ ಜಮಾ ಮಾಡಿರುವ ಬಗ್ಗೆ ತೋರಿಸಿರುವುದಿಲ್ಲ. ಆರೋಪಿಯ ಅಂದಾಜು ರೂ 20,000/- ಮೌಲ್ಯದ ಷೇರುಗಳು ಈಗಲೂ ನಮ್ಮ ಸಂಸ್ಥೆಯಲ್ಲಿ ಇದೆ. ನನ್ನ ಬಳಿ ಇರುವ ಆರೋಪಿಗೆ ಸಂಬಂಧಿಸಿದ ದಾಖಲೆಗಳಲ್ಲಿಯೂ ದಿಃ 30-03-2021 ಕ್ಕೆ ರೂ. 4,67,657/- ಬಾಕಿ ಇತ್ತು ಎಂದು ಕಂಡುಬರುವುದಿಲ್ಲ. ಗಣಕೀಕೃತ ಪ್ರತಿಯಲ್ಲೂ ಕಂಡುಬರುವುದಿಲ್ಲ ಎಂದರೆ ಸರಿ. ಚೆಕ್ ನಲ್ಲಿ ಕೇಳಿದ ಮೊತ್ತ ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳಲ್ಲಿ ಇರಬೇಕು ಎಂದು ನಿಮಗೆ ಗೊತ್ತಿರುತ್ತದೆ ಎಂದರೆ ಇಲ್ಲ. ದಿನಾಂಕ 31-03-2021 ಕ್ಕೆ ರೂ. 4,05,752/- ಅಸಲು ಬಾಕಿ ಇರುತ್ತದೆ. ನಿಪಿ-11 ರಲ್ಲಿ ಬಡ್ಡಿ ಕಾಲಂನಲ್ಲಿ ನಮೂದಿಸಿರುವ ಮೊತ್ತವು ಬಾಕಿ ಇರುವ ಮೊತ್ತದ ಬಗ್ಗೆ ಕಾಣಿಸಲಾಗಿದೆ. ದಿಃ 31-03-2021 ರಂದು ಆರೋಪಿಯ ಉಳಿತಾಯ ಖಾತೆಯಿಂದ ರೂ 7,000/- ಮೊತ್ತವನ್ನು ಸಾಲದ ಖಾತೆಗೆ ನಾವೇ ವರ್ಗಾವಣೆ ಮಾಡಿರುತ್ತೇವೆ. ನಿಪಿ-11 ರಲ್ಲಿ ಇರುವ 31-03-2021 ರ ಹಿಂದಿನ ವ್ಯವಹರಣೆಗಳು ನಗದಾಗಿ ಪಾವತಿಸಿದ್ದಾಗಿ ಕಾಣುತ್ತದೆ. ದಿಃ 14-01-2021 ರಂದು ನಮ್ಮ ಚಾಲ್ತಿ ಖಾತೆಯಿಂದ ಆರೋಪಿ ಸಾಲದ ಖಾತೆಗೆ ರೂ. 23,000/- ವರ್ಗಾವಣೆ ಮಾಡಿರುತ್ತೇವೆ. ಶೇಕಡಾ 3.75 ರಂತೆ ಪೆನಲ್ ಇಂಟರೆಸ್ಟ್ ಇರುತ್ತದೆ. ದಾಖಲೆಗಳನ್ನು ನಮಗೆ ಬೇಕಾದಂತೆ ಸೃಷ್ಟಿಸಿ ಹಾಜರುಪಡಿಸಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯ ವಿರುದ್ಧ ಆರ್ಬಿಟ್ರೇಷನ್ ಪ್ರೊಸೀಡಿಂಗ್ಸ್ ಮಾಡಿರುತ್ತೇವೆ. ಆರ್ಬಿಟ್ರೇಷನ್ ಪ್ರೊಸೀಡಿಂಗ್ಸ್ ನ್ನು ಮುಖ್ಯ

ಕಚೇರಿಯವರು ನಡೆಸುತ್ತಿದ್ದು ಯಾವ ಹಂತದಲ್ಲಿದೆ, ಎಷ್ಟು ಮೊತ್ತಕ್ಕೆ ಎಂದು ಗೊತ್ತಿಲ್ಲ. ಆರೋಪಿಗೆ ಸೇರಿದಂತಹ ಪಿಗ್ಮಿ ಖಾತೆ ಇದ್ದ ಬಗ್ಗೆ ಗೊತ್ತಿಲ್ಲ. ನೋಟೀಸು ನೀಡಿದಾಗ ಇದ್ದ ಮಾಲಿನಿ ಲೋಬೋ ರವರನ್ನು ಸಾಕ್ಷಿಯಾಗಿ ಮಾಡಬಹುದು. ಆರೋಪಿಯ 2 ಎಫ್.ಡಿಗಳನ್ನು ಸಾಲದ ಖಾತೆಗೆ ಜಮಾ ಮಾಡುವಾಗ ಆರೋಪಿಗೆ ನೋಟೀಸು ನೀಡಿರುವುದಿಲ್ಲ. ಒಬ್ಬ ವ್ಯಕ್ತಿಯ ಠೇವಣಿಯನ್ನು ಯಾವುದೇ ಸಾಲದ ಖಾತೆಗೆ ಜಮಾ ಮಾಡುವಾಗ ನೋಟೀ ಸು ನೀಡಬೇಕು ಎಂಬ ವಿಚಾರ ಗೊತ್ತಿದೆಯೇ ಎಂದರೆ ಇಲ್ಲ.

ಸಾಲ ಕೊಡುವಂತಹ ಸಂದರ್ಭದಲ್ಲಿ ಆರೋಪಿಯ ಸಹಿಗಳನ್ನು ಸಾಲದ ಅರ್ಜಿ, ಮುದ್ದತಿ ವಚನ, ಸಾಲದ ಕರಾರು, ಹೈಪೊತಿಕೇಷನ್ ಅಗ್ರಿಮೆಂಟ್, ಡಿ.ಪಿ ನೋಟ್, ಸ್ಟಾಂಡಿಂಗ್ ಇಂಸ್ಟ್ರಕ್ಷನ್ ಗಳಿಗೆ ತೆಗೆದುಕೊಳ್ಳುತ್ತೇನೆ. ಸ್ಟಾಂಡಿಂಗ್ ಇಂಸ್ಟ್ರಕ್ಷನ್ ದಾಖಲೆಗಳನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುವುದಿಲ್ಲ. ಅವುಗಳು ಪ್ರಿಂಟೆಡ್ ಫಾರ್ಮ್ ಗಳಾಗಿರುತ್ತದೆ. ಅದನ್ನು ನಾವು ಪಕ್ಷಗಾರರ ಸಮಕ್ಷಮ ಭರ್ತಿ ಮಾಡುತ್ತೇವೆ. ಸ್ಟಾಂಡಿಂಗ್ ಇಂಸ್ಟ್ರಕ್ಷನ್ ಫಾರ್ಮ್ ನಲ್ಲಿ ಸಾಲದ ಖಾತೆ ನಂಬರ್, ಉಳಿತಾಯ ಖಾತೆ ನಂಬರ್ ಇರುತ್ತದೆ. ಎಫ್.ಡಿ ಹೊಂದಾಣಿಕೆ ಮಾಡುವಾಗ ಆರೋಪಿತನಿಗೆ ಮಾಹಿತಿ ನೀಡದೆ ಸಾಲದ ಖಾತೆಗೆ ಜಮಾ ಮಾಡಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತನಿಗೆ ಸೇರಿದ ಎಲ್.ಐ.ಸಿ ಬಾಂಡ್ ಮೊತ್ತ ಈಗಲೂ ಆರೋಪಿಯ ಹೆಸರಿನಲ್ಲಿ ಇದೆ. ಆರೋಪಿತನು ಎಷ್ಟು ಹಣವನ್ನು ಸಾಲದ ಖಾತೆಗೆ ಕಟ್ಟಿರುತ್ತಾರೆ ಮತ್ತು ಆರೋಪಿಗಳ ಷೇರುಗಳು, ಎಫ್.ಡಿ ಗಳನ್ನು ಆರೋಪಿ ಸಾಲದ ಖಾತೆಗೆ ಜಮಾ ಮಾಡಿಕೊಂಡಿರುವ ಬಗ್ಗೆ ನೋಟೀಸು, ಪಿರ್ಯಾದಿ ಹಾಗೂ ಮುಖ್ಯ ವಿಚಾರಣೆಯಲ್ಲಿ ಕಾಣಿಸಿರುವುದಿಲ್ಲ ಎಂದರೆ ಸರಿ. ನಿಪಿ-3 ರಂತೆ ನೋಟೀಸು ನೀಡುವ ಪೂರ್ವದಲ್ಲಿ ಆರೋಪಿಯ ಖಾತೆಯಲ್ಲಿ ಎಷ್ಟು ಮೊತ್ತ ಇದೆ ಎಂದು ನೋಡಿ ಕೊಡಬೇಕು. ನಿಪಿ-3 ನೋಟೀಸನ್ನು ಆರೋಪಿ ನೀಡಿದ ಚೆಕ್ ನ ಆಧಾರದಲ್ಲಿ ನೀಡಿರುತ್ತೇವೆ. ನಮ್ಮ ಜನರೇಟರ್ ಸಿಸ್ಟಮ್ ನ ರಶೀದಿಯಲ್ಲಿ ಆರೋಪಿಯ ಸಾಲ 30-03-2021 ಕ್ಕೆ ಎಷ್ಟು ಇತ್ತು ಎಂದು ಕಂಡುಬರುತ್ತದೆ. ಮೇಲೆ ಹೇಳಿದ ರಶೀದಿಯನ್ನು ಲಗತ್ತಿಸಿ ನಿಪಿ-3 ನೋಟೀಸು ನೀಡುವ ಪೂರ್ವದಲ್ಲಿ ಆರೋಪಿಗೆ ಯಾವುದೇ ನೋಟೀಸು ನೀಡಿರುವುದಿಲ್ಲ. ಸದ್ರಿ ರಶೀದಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ನಿಪಿ-8 ದಾಖಲೆ ಅಪೂರ್ಣ ದಾಖಲೆ

ಎಂದರೆ ಸರಿ. ಸದ್ರಿ ದಾಖಲೆಯಲ್ಲಿ ಸಾಕ್ಷಿದಾರರ ಸಹಿ ಇರುವ ಕಾಲಂ ಖಾಲಿ ಇರುತ್ತದೆ ಎಂದರೆ ಸರಿ. ನಿಪಿ-9 ರಲ್ಲಿ ಜಾಮೀನುದಾರರ ಸಹಿ ಮತ್ತು ಸಾಕ್ಷಿದಾರರ ಸಹಿಗಳ ಕಾಲಂ ಖಾಲಿ ಇದೆ ಎಂದರೆ ಸರಿ. ನಿಪಿ-10 ದಾಖಲೆ ಭರ್ತಿ ಮಾಡುವ ಜಾಗಗಳು ಖಾಲಿ ಇವೆ. ಸಾಲಗಾರರ ತಾಯಿಯನ್ನು ಜಾಮೀನುದಾರರಾಗಿ ಕಾಣಿಸಿದ ಕಾರಣ ಭರ್ತಿ ಮಾಡಿರುವುದಿಲ್ಲ. ಭರ್ತಿ ಮಾಡದ ಕಾಲಂಗಳನ್ನು ಸ್ಟ್ರೈಕ್ ಆಫ್ ಮಾಡಬೇಕು ಎಂದರೆ ಗೊತ್ತಿಲ್ಲ. ನಾವು ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳನ್ನು ಯಾರು ಭರ್ತಿ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ಆರೋಪಿತನ ಸಾಲಕ್ಕೆ ಆರೋಪಿಯ ತಾಯಿ, ಸಿರಾಜುದ್ದೀನ್, ಸಮೀರ್ ಜಾಮೀನುದಾರರಾಗಿರುತ್ತಾರೆ. ನಿಪಿ-6 ದಾಖಲೆಯಲ್ಲಿ ಖತೀಜ ಎಂಬ ಆರೋಪಿಯ ತಾಯಿಯ ಸಹಿ ಹಾಗೂ ವಿಳಾಸ ಕಂಡುಬರುವುದಿಲ್ಲ ಎಂದರೆ ಸರಿ. ಜಾಮೀನುದಾರರಾಗಿ ಸಹಿ ಮಾಡಿದಂತಹ ವ್ಯಕ್ತಿಗಳ ಸಾಲ ನಮ್ಮ ಸೊಸೈಟಿಯಲ್ಲಿ ಬಾಕಿ ಇದೆ. ಅವರ ವಿರುದ್ಧ ಪ್ರಕರಣ ದಾಖಲಿಸಿರುವುದಿಲ್ಲ. ಆರೋಪಿತರಿಗೆ ಸಾಲ ನೀಡುವಂತಹ ಸಂಧರ್ಬದಲ್ಲಿ ಭದ್ರತೆಗಾಗಿ ತೆಗೆದುಕೊಳ್ಳುವ ಚೆಕ್ ಗಳ ನಂಬರ್ ಗಳನ್ನು ನಮ್ಮ ದಾಖಲೆ ಪತ್ರದಲ್ಲಿ ನಮೂದಿಸಿರುವುದಿಲ್ಲ. ಪ್ರಸ್ತುತ ಸಾಲ ನೀಡುವಾಗ ಚೆಕ್ ನಂಬರ್ ಗಳನ್ನು ನಮೂದಿಸುತ್ತೀರಾ ಎಂದರೆ ಗೊತ್ತಿಲ್ಲ. ಕಾರಣ ನಾನು ಸಾಲದ ವಿಭಾಗದಲ್ಲಿ ಕೆಲಸ ಮಾಡುತ್ತಿಲ್ಲ. ಸಾಲ ಕೊಡುವಂತಹ ಸಂದರ್ಭದಲ್ಲಿ, ಸಾಲದ ವ್ಯವಹಾರದ ಪ್ರಕ್ರಿಯೆಯಲ್ಲಿ ಭಾಗಿಯಾಗದ ಕಾರಣ, ಸಿ.ಇ.ಓ ಆಗಿರದ ಕಾರಣ ನನಗೆ ಈ ಪ್ರಕರಣದ ಬಗ್ಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ ಕೇಳಿದಂತಹ ಯಾವುದೇ ಮೊತ್ತ ಆರೋಪಿ ನೀಡಲು ಬಾಕಿ ಇಲ್ಲ ಎಂದರೆ ಸರಿಯಲ್ಲ. ನಾನು ಸಾಲ ವಸೂಲಾತಿ ವಿಭಾಗದಲ್ಲಿ ಕೆಲಸ ಮಾಡುತ್ತಿರುವುದರಿಂದ ನಾನು ಸಾಕ್ಷ್ಯ ನುಡಿಯಲು ಅರ್ಹನಲ್ಲ ಎಂದರೆ ಸರಿಯಲ್ಲ. ದಿಃ 31-05-2021 ರಂದು ಕಿಶೋರ್ ದೇವಾಡಿಗ ರವರಿಗೆ ನಮ್ಮ ಸಂಸ್ಥೆಯ ಎಮ್.ಡಿ ಅಧಿಕಾರ ಪತ್ರ ನೀಡಿರುತ್ತಾರೆ. ನನಗೆ ನೀಡಿದ ನಿಪಿ-5 ಅಧಿಕಾರ ಪತ್ರವನ್ನು ನಮ್ಮ ಸಂಸ್ಥೆಯ ಎಮ್.ಡಿ ನೀಡಿರುತ್ತಾರೆ. ನಮ್ಮ ಸಂಸ್ಥೆಗೆ ಸಂಬಂಧಿಸಿದ ಎಲ್ಲಾ ದಾಖಲೆಗಳು ಸಿ.ಇ.ಓ ಅವರ ಸ್ವಾಧೀನದಲ್ಲಿರಬೇಕು ಎಂದರೆ ನನಗೆ ಗೊತ್ತಿಲ್ಲ. ನನಗೆ ಸಾಕ್ಷ್ಯ ನುಡಿಯಲು ಹಾಗೂ ಕಿಶೋರ್ ದೇವಾಡಿಗ ರವರಿಗೆ ಪ್ರಕರಣ ದಾಖಲಿಸಲು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಜನರಲ್ ಬಾಡಿ ಮೀಟಿಂಗ್ ಮತ್ತು

ಸ್ಯಾಲರಿ ಮತ್ತು ನಮ್ಮ ಶಾಖೆಯ ಎಲ್ಲಾ ವ್ಯವಹಾರಗಳನ್ನು ಎಮ್.ಡಿ ನೋಡಿಕೊಳ್ಳುತ್ತಾರೆ. ನಮ್ಮ ಶಾಖೆಯಲ್ಲಿ ಸಿ.ಇ.ಒ ಮತ್ತು ಎಮ್.ಡಿ ಒಬ್ಬರೇ ಆಗಿರುತ್ತಾರೆ. ಆ ಕುರಿತು ದಾಖಲೆ ಇಲ್ಲ. ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ಚೆಕ್ಕನ್ನು ಸೃಷ್ಟಿಸಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇರುವುದಿಲ್ಲ.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ., ಕಾರ್ಕಳ